Akashvani : Bengaluru
National Bulletin In Kannada
01.10.2025 : 1310hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

01.10.2025 : 1310hrs

*******

ಮುಖ್ಯಾಂಶಗಳು

೧. ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ; ಸಂಘದ ಕೊಡುಗೆಗಳ ಕುರಿತು ಶ್ಲಾಘನೆ

೨. ಜಿಡಿಪಿ ಬೆಳವಣಿಗೆಯ ಅಂದಾಜುಗಳನ್ನು ಶೇ. ೬.೮ ಕ್ಕೆ ಪರಿಷ್ಕರಿಸಿದ ಆರ್‌ಬಿಐ; ರೆಪೋ ದರ ಯಥಾಸ್ಥಿತಿ

೩. ಏಳು ವರ್ಷಗಳಲ್ಲೇ ಮೊದಲ ಬಾರಿಗೆ ಅಮೆರಿಕ ಸರ್ಕಾರದ ಕಾರ್ಯಗಳು ಇಂದು ಅಧಿಕೃತವಾಗಿ ಸ್ಥಗಿತ

೪. ಫಿಲಿಪೈನ್ಸ್‌ನಲ್ಲಿ ಭೂಕಂಪ; ಸಾವನ್ನಪ್ಪಿದವರ ಸಂಖ್ಯೆ ೬೯ಕ್ಕೆ ಏರಿಕೆ

****************

ಪ್ರಧಾನಿ ನರೇಂದ್ರ ಮೋದಿ ಇಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘ-ಆರ್‌ಎಸ್‌ಎಸ್‌ನ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿದರು. ಶತಮಾನೋತ್ಸವ ಆಚರಣೆಯು ಆರ್‌ಎಸ್‌ಎಸ್‌ನ ಪರಂಪರೆ, ಅದರ ಸಾಂಸ್ಕೃತಿಕ ಕೊಡುಗೆಗಳು ಮತ್ತು ರಾಷ್ಟ್ರೀಯ ಏಕತೆಯಲ್ಲಿನ ಪಾತ್ರದ ಮೇಲೆ ಕೇಂದ್ರೀಕರಿಸಿದೆ. ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಆರ್‌ಎಸ್‌ಎಸ್, ರಾಷ್ಟ್ರ ನಿರ್ಮಾಣಕ್ಕಾಗಿ ಶ್ರಮಿಸುತ್ತಿದೆ. ೧೦೦ ವರ್ಷಗಳ ಹಿಂದೆ ಈ ಮಹತ್ವದ ದಿನದಂದು ಆರ್‌ಎಸ್‌ಎಸ್ ಅನ್ನು ಒಂದು ಸಂಘಟನೆಯಾಗಿ ಸ್ಥಾಪಿಸುವುದು ಕೇವಲ ಕಾಕತಾಳೀಯವಲ್ಲ, ಬದಲಾಗಿ ಸಾವಿರಾರು ವರ್ಷಗಳಿಂದ ಮುಂದುವರೆದು ಬಂದ ಪರಂಪರೆಯ ಪುನರುತ್ಥಾನ ಎಂದು ನುಡಿದರು. ಆರ್‌ಎಸ್‌ಎಸ್ ಸ್ವಯಂಸೇವಕರು ರಾಷ್ಟ್ರ ಸೇವೆ ಮತ್ತು ಸಮಾಜವನ್ನು ಸಬಲೀಕರಣಗೊಳಿಸಲು ಅವಿರತವಾಗಿ ಸಮರ್ಪಿತರಾಗಿದ್ದಾರೆ. ೧೯೬೩ ರಲ್ಲಿ ನಡೆದ

ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಸಹ ಭಾಗವಹಿಸಿ ಹೆಮ್ಮೆಯಿಂದ ಹೆಜ್ಜೆಹಾಕಿದ್ದರು ಎಂದು ಪ್ರಧಾನಿ ನೆನಪಿಸಿಕೊಂಡರು. ನಾಳೆ ವಿಜಯದಶಮಿ, ಇದು ಅನ್ಯಾಯದ ವಿರುದ್ಧ ನ್ಯಾಯದ ಗೆಲುವು, ಅಸತ್ಯದ ವಿರುದ್ಧ ಸತ್ಯದ ಗೆಲುವು ಮತ್ತು ಕತ್ತಲೆಯ ಮೇಲೆ ಬೆಳಕಿನ ವಿಜಯವನ್ನು ಸಂಕೇತಿಸುವ ಹಬ್ಬವಾಗಿದೆ ಎಂದು ಪ್ರಧಾನಿ ಹೇಳಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( ೩೧ ಸೆಕೆಂಡುಗಳು)

ಈ ಸಂದರ್ಭದಲ್ಲಿ, ರಾಷ್ಟ್ರಕ್ಕೆ ಆರ್‌ಎಸ್‌ಎಸ್‌ನ ಕೊಡುಗೆಗಳನ್ನು ಪ್ರದರ್ಶಿಸುವ ವಿಶೇಷವಾಗಿ ವಿನ್ಯಾಸಗೊಳಿಸಲಾದ ಸ್ಮರಣಾರ್ಥ ಅಂಚೆ ಚೀಟಿ ಮತ್ತು ನಾಣ್ಯವನ್ನು ಸಹ ಪ್ರಧಾನಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಆರ್‌ಎಸ್‌ಎಸ್ ಜನರಲ್ಲಿ ರಾಷ್ಟ್ರ ನಿರ್ಮಾಣದ ಚೈತನ್ಯ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಹುಟ್ಟುಹಾಕಿತು ಎಂದು ಹೇಳಿದರು. ಆರ್‌ಎಸ್‌ಎಸ್ ಸರಕಾರ್ಯವಾಹ್ ದತ್ತಾತ್ರೇಯ ಹೊಸಬಾಳೆ ಮಾತನಾಡಿ, ಆರ್‌ಎಸ್‌ಎಸ್‌ನ ಕೆಲಸಗಳು ಮತ್ತು ಚಟುವಟಿಕೆಗಳನ್ನು ದೇಶದ ಮೂಲೆ ಮೂಲೆಯಲ್ಲಿಯೂ ಕಾಣಬಹುದು. ಸಂಘಟನೆಯ ಸ್ವಯಂಸೇವಕರು ಸಾಮಾಜಿಕ ಅಭಿವೃದ್ಧಿ, ರಾಷ್ಟ್ರೀಯ ಸೇವೆ, ಭದ್ರತೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು.

****************

ಭಾರತೀಯ ರಿಸರ್ವ್ ಬ್ಯಾಂಕ್ ಆರ್‌ಬಿಯ ಪ್ರಸಕ್ತ ಹಣಕಾಸು ವರ್ಷದ ಜಿಡಿಪಿ ಬೆಳವಣಿಗೆಯ ಅಂದಾಜುಗಳನ್ನು ಶೇ. ೬.೮ ಕ್ಕೆ ಪರಿಷ್ಕರಿಸಿದೆ. ಇದರ ಜೊತೆಗೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರವನ್ನು ಶೇ. ೨.೬ ರಷ್ಟಿರಲಿದೆ ಎಂದು ಅಂದಾಜಿಸಿದೆ. ಇದು ಹಿಂದಿನ ಅಂದಾಜಿಗಿಂತ ಕಡಿಮೆಯಾಗಿದೆ. ಈ ವರ್ಷದ ಆಗಸ್ಟ್‌ನಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ೨೦೨೫-೨೬ ರ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆಯ ದ£ಶೇ. ೬.೫ ರಷ್ಟು ಹಾಗೂ ಹಣದುಬ್ಬರ ಶೇ. ೩.೧ ರಷ್ಟಿರುವ ಅಂದಾಜು ಮಾಡಿತ್ತು. ಈ ನಡುವೆ, ಆರ್‌ಬಿಐ ರೆಪೋ ಬಡ್ಡಿದರಗಳನ್ನು ಯಥಾಸ್ಥಿತಿಯಲ್ಲಿಟ್ಟಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಮುಂಬೈನಲ್ಲಿಂದು ಪ್ರಸಕ್ತ ಹಣಕಾಸು ವರ್ಷದ ನಾಲ್ಕನೇ ದ್ವೈಮಾಸಿಕ ನೀತಿಯನ್ನು ಪ್ರಕಟಿಸಿದರು. ಆರ್‌ಬಿಐ ತನ್ನ ರೆಪೊ

ದರವನ್ನು ಶೇ. ೫.೫ ರಲ್ಲಿಯೇ ಯಥಾಸ್ಥಿತಿಯಲ್ಲಿಡಲು ನಿರ್ಧರಿಸಿದೆ ಎಂದು ಅವರು ತಿಳಿಸಿದರು. ಹಣಕಾಸು ನೀತಿ ಸಮಿತಿ - ಎಂಪಿಸಿ ನೀತಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿಡಲು ಸರ್ವಾನುಮತದಿಂದ ಮತ ಚಲಾಯಿಸಿದೆ ಮತ್ತು ತಟಸ್ಥ ನಿಲುವನ್ನು ಮುಂದುವರಿಸಲು ನಿರ್ಧರಿಸಿದೆ ಎಂದು ಅವರು ಹೇಳಿದರು.

ಧ್ವನಿ : ಆರ್.ಬಿ.ಐ ಗವರ್ನರ್ ಸಂಜಯ್ ಎಂ. ( ೨೮ ಸೆಕೆಂಡುಗಳು)

****************

ದೇಶದ ವಿವಿಧ ಭಾಗಗಳಲ್ಲಿ ಇಂದು ಮಹಾನವಮಿಯನ್ನು ಆಚರಿಸಲಾಗುತ್ತಿದೆ. ದುರ್ಗಾನವಮಿ ಎಂದೂ ಕರೆಯಲ್ಪಡುವ ಈ ದಿನವನ್ನು ನವರಾತ್ರಿ ಹಬ್ಬದ ಒಂಬತ್ತನೇ ಮತ್ತು ಕೊನೆಯ ದಿನವಾಗಿ ಆಚರಿಸಲಾಗುತ್ತದೆ. ಭಕ್ತರು ಇಂದು ದುರ್ಗಾ ದೇವಿಯ ಒಂಬತ್ತನೇ ಮತ್ತು ಅಂತಿಮ ರೂಪವಾದ ಮಾ ಸಿದ್ಧಿಧಾತ್ರಿಯನ್ನು ಪೂಜಿಸುತ್ತಾರೆ. ಭಕ್ತರು ಕನ್ಯಾ ಪೂಜನದಂತಹ ಆಚರಣೆಗಳೊಂದಿಗೆ ಈ ದಿನವನ್ನು ಆಚರಿಸುತ್ತಾರೆ ಹಾಗೂ ಆಶೀರ್ವಾದ ಮತ್ತು ಸಮೃದ್ಧಿಗಾಗಿ ದುರ್ಗಾ ದೇವಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಎಲ್ಲರ ಬಾಳಿನಲ್ಲಿ ಈ ಹಬ್ಬ ಅದೃಷ್ಟ, ಸಮೃದ್ಧಿ ಮತ್ತು ಯಶಸ್ಸನ್ನು ತರಲಿ ಎಂದು ಆಶಿಸಿದ್ದಾರೆ.

****************

ಸುಮಾರು ಏಳು ವರ್ಷಗಳಲ್ಲೇ ಮೊದಲ ಬಾರಿಗೆ ಅಮೆರಿಕ ಸರ್ಕಾರದ ಕಾರ್ಯಗಳು ಇಂದು ಅಧಿಕೃತವಾಗಿ ಸ್ಥಗಿತಗೊಂಡಿದೆ. ರಿಪಬ್ಲಿಕನ್ನರು ಮತ್ತು ಡೆಮೋಕ್ರಾಟ್‌ಗಳು, ಖರ್ಚು ಮಸೂದೆಯ ಕುರಿತು ಒಪ್ಪಂದಕ್ಕೆ ಬರಲು ವಿಫಲವಾದ ನಂತರ ಈ ಬೆಳವಣಿಗೆ ನಡೆದಿದೆ. ಆರೋಗ್ಯ ರಕ್ಷಣೆಯ ಮೇಲೆ ಕೇಂದ್ರೀಕೃತವಾದ ರಿಯಾಯಿತಿಗಳ ಕುರಿತು ಒಮ್ಮತ ಮೂಡದ ಹಿನ್ನೆಲೆಯಲ್ಲಿ ಡೆಮೋಕ್ರಾಟ್‌ಗಳು, ರಿಪಬ್ಲಿಕನ್ ನಿಧಿ ಪ್ಯಾಕೇಜ್ ಅನ್ನು ಬೆಂಬಲಿಸಲು ನಿರಾಕರಿಸಿದರು. ಈ ಬೆಳವಣಿಗೆಯಿಂದಾಗಿ, ಕೆಲವು ಸರ್ಕಾರಿ ಸೇವೆಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಇದರಿಂದಾಗಿ ಲಕ್ಷಾಂತರ ಸರ್ಕಾರಿ ನೌಕರರ ಸಂಬಳವನ್ನು ತಡೆಹಿಡಿಯಲಾಗಿದೆ. ಈ ನಡುವೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸರ್ಕಾರಿ ನೌಕರರ ಸಾಮೂಹಿಕ ವಜಾಗಳನ್ನು ಜಾರಿಗೆ ತರಲು, ನಿಧಿಯ ಕೊರತೆಯನ್ನು ಬಳಸುವುದಾಗಿ ಬೆದರಿಕೆ ಹಾಕಿದ್ದಾರೆ. ಶ್ವೇತಭವನದ ಅಧಿಕೃತ ವೆಬ್‌ಸೈಟ್‌ನಲ್ಲಿ

ಡೆಮೋಕ್ರಾಟ್‌ಗಳು ಸರ್ಕಾರವನ್ನು ಸ್ಥಗಿತಗೊಳಿಸಿದ್ದಾರೆ ಎಂದು ಬರೆಯಲಾದ ಬ್ಯಾನರ್ ಅನ್ನು ಪ್ರದರ್ಶಿಸಲಾಗಿದೆ.

****************

ಮಧ್ಯ ಫಿಲಿಪ್ಪೈನ್ಸ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ಸಾವನ್ನಪ್ಪಿದವರ ಸಂಖ್ಯೆ ೬೯ಕ್ಕೆ ಏರಿಕೆಯಾಗಿದೆ. ಫಿಲಿಪ್ಪೈನ್ಸ್‌ನ ನಾಗರಿಕ ರಕ್ಷಣಾ ಕಚೇರಿಯ ಪ್ರಕಾರ, ನಾಪತ್ತೆಯಾದ ಜನರ ಗುರುತುಗಳನ್ನು ಪರಿಶೀಲಿಸಲಾಗುತ್ತಿದ್ದು, ಜನರು ಅವಶೇಷಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂಬ ವರದಿಗಳು ಬರುತ್ತಿವೆ. ನಿನ್ನೆ ರಾತ್ರಿ ಫಿಲಿಪ್ಪೈನ್ಸ್‌ನ, ಕರಾವಳಿ ನಗರವಾದ ಸೆಬುವಿನಲ್ಲಿ ಸಂಭವಿಸಿದ ಪ್ರಬಲ ೬.೯ ರಷ್ಟು ತೀವ್ರತೆಯ ಭೂಕಂಪದ ನಂತರ ೧೫೦ ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮಧ್ಯ ಫಿಲಿಪ್ಪೈನ್ಸ್‌ನ ಅನೇಕ ನೆರೆಯ ಪ್ರಾಂತ್ಯಗಳು ಮತ್ತು ದಕ್ಷಿಣ ಫಿಲಿಪ್ಪೈನ್ಸ್‌ನ ಕೆಲವು ಪ್ರದೇಶಗಳಲ್ಲಿಯೂ ಭೂಕಂಪನದ ಅನುಭವವಾಗಿದೆ ಎಂದು ವರದಿಯಾಗಿದೆ.

****************

ಸಂಯೋಜಿತ ರಕ್ಷಣಾ ಸಿಬ್ಬಂದಿ - ಐಡಿಎಸ್ ಇಂದು ತನ್ನ ೨೫ ನೇ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. ಸಂಯೋಜಿತ ರಕ್ಷಣಾ ಸಿಬ್ಬಂದಿ ಹೊಸ ಜಂಟಿ ಮಿಲಿಟರಿ ರಚನೆಯನ್ನು ಬೆಂಬಲಿಸಿದೆ ಮತ್ತು ಸಂಯೋಜಿತ ಕಾರ್ಯವಿಧಾನಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಉಪಕ್ರಮಗಳಿಗೆ ಕೊಡುಗೆ ನೀಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸೈಬರ್, ಕೃತಕ ಬುದ್ಧಿಮತ್ತೆ ಮತ್ತು ಬಾಹ್ಯಾಕಾಶದಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ಈ ಸೇವೆ, ದೇಶದ ಸನ್ನದ್ಧತೆಯನ್ನು ಹೆಚ್ಚಿಸಿದೆ ಎಂದು ತಿಳಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಮಗ್ರ ರಕ್ಷಣಾ ಸಿಬ್ಬಂದಿ ರಕ್ಷಣಾ ಯೋಜನೆ ಮತ್ತು ಕಾರ್ಯಾಚರಣೆಯ ಸಮನ್ವಯತೆಯಲ್ಲಿ ದೇಶದ ಅನ್ವೇಷಣೆಯ ಸಂಕೇತವಾಗಿದೆ ಎಂದು ಶುಭಾಶಯ ಕೋರಿದರು. ಐಡಿಎಸ್ ಸಶಸ್ತ್ರ ಪಡೆಗಳು ಮತ್ತು ಉನ್ನತ ರಕ್ಷಣಾ ನಿರ್ವಹಣೆಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಮೂರು ಸೇನಾ ರಚನೆಗಳನ್ನು ಸುವ್ಯವಸ್ಥಿತಗೊಳಿಸುವಲ್ಲಿ, ಜಂಟಿ-ಸಿದ್ಧಾಂತಗಳನ್ನು ಉತ್ತೇಜಿಸುವಲ್ಲಿ ಮತ್ತು ಪಾಲುದಾರ ರಾಷ್ಟ್ರಗಳೊಂದಿಗೆ ಸಹಕಾರವನ್ನು

ಬಲಪಡಿಸುವಲ್ಲಿ ಅದರ ಕೊಡುಗೆ, ಉದಯೋನ್ಮುಖ ಭದ್ರತಾ ಸವಾಲುಗಳನ್ನು ಎದುರಿಸಲು ಸಿದ್ಧತೆಯನ್ನು ಹೆಚ್ಚಿಸಿದೆ ಎಂದು ಹೇಳಿದ್ದಾರೆ.

***************

ಲೆಫ್ಟಿನೆಂಟ್ ಜನರಲ್ ವೀರೇಂದ್ರ ವತ್ಸ ಇಂದು ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್- ಎನ್.ಸಿ.ಸಿಯ ಮಹಾನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಲೆಫ್ಟಿನೆಂಟ್ ಜನರಲ್ ವೀರೇಂದ್ರ ವತ್ಸ ಅವರನ್ನು ೧೯೮೮ರ ಡಿಸೆಂಬರ್‌ನಲ್ಲಿ ಭಾರತೀಯ ಸೇನೆಯ ೧೯ ಕುಮಾನ್ ರೆಜಿಮೆಂಟ್‌ಗೆ ನಿಯೋಜಿಸಲಾಗಿತ್ತು. ವೆಲ್ಲಿಂಗ್ಟನ್‌ನಲ್ಲಿರುವ ರಕ್ಷಣಾ ಸೇವೆಗಳ ಸಿಬ್ಬಂದಿ ಕಾಲೇಜಿನಲ್ಲಿ ಕಮಾಂಡೆಂಟ್ ಆಗಿಯೂ ಅವರು ಸೇವೆ ಸಲ್ಲಿಸಿದ್ದರು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಲೆಫ್ಟಿನೆಂಟ್ ಜನರಲ್ ಗುರ್ಬೀರ್‌ಪಾಲ್ ಸಿಂಗ್ ನಂತರ ವೀರೇಂದ್ರ ವತ್ಸ ಅಧಿಕಾರ ವಹಿಸಿಕೊಳ್ಳುತ್ತಿದ್ದಾರೆ.

***************

ಭಾರತೀಯ ರೈಲ್ವೆ ಇಂದು, ದೆಹಲಿ ಮತ್ತು ಕೋಲ್ಕತ್ತಾ ನಡುವೆ ಪ್ರಾಯೋಗಿಕ ಸಂಚಾರದ ಮೊದಲ ಖಚಿತ ಸಾರಿಗೆ ಸಮಯ ಕಂಟೇನರ್ ರೈಲು ಸೇವೆ ಪ್ರಾರಂಭಿಸಲು ಸಜ್ಜಾಗಿದೆ. ಈ ಸೇವೆಯು, ದೆಹಲಿಯ ಐಸಿಡಿ ತುಘಲಕಾಬಾದ್ ಟರ್ಮಿನಲ್‌ನಿಂದ, ಕಂಟೇನರ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ನ ಆಗ್ರಾ ಮತ್ತು ಕಾನ್ಪುರ್ ಟರ್ಮಿನಲ್‌ಗಳ ಮೂಲಕ ಸಿ.ಟಿ.ಸಿ.ಎಸ್ ಕೋಲ್ಕತ್ತಾ ವರೆಗೆ ಕಾರ್ಯನಿರ್ವಹಿಸುತ್ತದೆ.

***************